1. **ಪ್ರಶ್ನೆ:** ಈ ಕಛೇರಿಗೆ ಭೂ-ಪರಿವರ್ತನೆಗೆ ಅರ್ಜಿ ಸಲ್ಲಿಸುವ ವಿಧಾನ ಹೇಗೆ?

   ಉತ್ತರ: ಈ ಕಛೇರಿಯಲ್ಲಿ ನೇರವಾಗಿ ಅರ್ಜಿ ಸ್ವೀಕರಿಸುವುದಿಲ್ಲ. ಕಂದಾಯ ಇಲಾಖೆಯ ಮುಖಾಂತರ ಅರ್ಜಿ ಸಲ್ಲಿಸತಕ್ಕದ್ದು.

2. **ಪ್ರಶ್ನೆ:** ಭೂ-ಪರಿವರ್ತನೆಗೆ ಅರ್ಜಿಯ ಜೊತೆ ಸಲ್ಲಿಸಬೇಕಾದ ದಾಖಲಾತಿಗಳು ಯಾವುದು?

   ಉತ್ತರ: ಭೂ-ಪರಿವರ್ತನೆಗೆ ತಾಂತ್ರಿಕ ಅಭಿಪ್ರಾಯ ನೀಡುವ ಸಂಬಂಧ ಈ ಕೆಳಕಂಡ ದಾಖಲಾತಿಗಳನ್ನು ಸಲ್ಲಿಸಬೇಕಾಗಿರುತ್ತದೆ.

   - ಆರ್.ಟಿ.ಸಿ
   - ಕ್ರಯ ಪತ್ರದ ಪ್ರತಿ.
   - ಪ್ರಸ್ತಾವಿತ ಜಾಗಕ್ಕೆ ರಸ್ತೆಯನ್ನು ಗುರ್ತಿಸಿರುವ ಕಂದಾಯ ಇಲಾಖೆಯಿಂದ ದೃಢೀಕರಿಸಿರುವ ಸರ್ವೆ ಸ್ಕೆಚ್.
   - ಅಲಿನೇಷನ್ ನಕ್ಷೆ
   - ಮ್ಯುಟೇಶನ್ ಪ್ರತಿ.
   - ಗ್ರಾಮ ಪಂಚಾಯಿತಿ ನಿರಾಕ್ಷೇಪಣಾ ಪತ್ರ.
   - ಗ್ರಾಮನಕ್ಷೆ (ಗ್ರಾಮ ನಕ್ಷೆಯಲ್ಲಿ ಭೂಪರಿವರ್ತನೆ ಕೋರಿರುವ ಜಾಗವನ್ನು ನಿಖರವಾಗಿ ಗುರುತಿಸಿರುವುದು).